Visit of I.D.A. delegation to Upper Krishna Project site

800. Sri S. M. GURADDI (Muddebihal).—

Will the Chief Minister be pleased to state :—

whether it is a fact that a delegation from International Development Association visited the Upper Krishna Project Site ?

Sri VEERENDRA PATIL (Chief Minister).—

Yes.

Visit of I.D.A. delegation to Upper Krishna Project site

852. Sri D. B. KALMANKAR (Aland).—

Will the Chief Minister be pleased to state :—

(*a*) whether any experts of the World Bank or Members of I.D.A. had visited the Upper Krishna Project site in January 1969 ;

(*b*) if so, at whose instance ;

(*c*) what report is submitted by them to the Government of India and to the State Government ;

(*d*) whether the I.D.A. has agreed to advance loan for the Upper Krishna Project ;

(*e*) if not in the alternative way how Government propose to execute the project ?

Sri VEERENDRA PATIL (Chief Minister).—

(*a*) Yes.

(*b*) At the instance of Government of India.

(*c*) Not known but no report is so far received by the State Government.

(*d*) Not known.

(*e*) The project has been taken up for construction with the available resources.

ಶ್ರೀ ಕೆ. ನಂಗನಗೌಡ.—(೩) ಪ್ರಶ್ನೆಗೆ ಉತ್ತರವಾಗಿ ಇಡೀ ಯೋಜನೆಗೆ ಸಹಾಯವನ್ನು ಭಾರತ ಸರ್ಕಾರದವರಿಂದ ಕೋರಲಾಗಿದೆ ಎಂದು ಹೇಳಿದ್ದೀರಿ. ನಿರ್ದಿಷ್ಟವಾಗಿ ಎಷ್ಟು ಹಣ ಎಂದು ತೋರಿಸಿಲ್ಲ. ಫಸ್ಟ್ ಸ್ಟೇಜ್‌ಗೆ ನಮ್ಮ ಸರ್ಕಾರದವರು ಕೇಂದ್ರದವರನ್ನು 100 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆಂದು ನನಗೆ ತಿಳಿದಿದೆ. ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯವರು ಅಲ್ಲಿ ಒಂದು ದಿನ ಕ್ಯಾಂಪ್ ಮಾಡಿ ಎರಡು ಸ್ಟೇಜ್ ಬೆಲನಗಳನ್ನು ಒಂದೇ ಹಂತದಲ್ಲಿ ಮಾಡಿ ಎಷ್ಟು ಹಣ ಬೇಕು ಎಂಬುದನ್ನು ಕೇಳುವುದಕ್ಕೆ ಹೇಳಿದ್ದಾರೆಂದು ಮತ್ತು ಆ ಬಗ್ಗೆ ಎಲ್ಲಾ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ತಿಳಿದುಬಂದಿದೆ. ಅದು ನಿಜವೇ ?

† ಶ್ರೀ ವೀರೇಂದ್ರ ಪಾಟೀಲ್.—ಪ್ರಾಜೆಕ್ಟ್ ರಿಪೋರ್ಟನ್ನು ನಾವು ಕಳುಹಿಸಿ ಕೊಟ್ಟಿಲ್ಲ. ಕೇಂದ್ರ ಸರಕಾರದ ಮುಖಾಂತರ ನಾವು ಎಲ್ಲ ವಿವರಗಳನ್ನು ಪ್ರಾಜೆಕ್ಟ್ ರಿಪೋರ್ಟನಲ್ಲಿ ಒದಗಿಸಿ ಕಳುಹಿಸಿಕೊಟ್ಟಿದ್ದೇವೆ. ಇದರ ಮೇಲೆ ಕಮಿಷನ್‌ನ ಕೆಲವು ಸದಸ್ಯರು ಇಲ್ಲಿಗೆ ಬಂದು ಸ್ಥಳಗಳನ್ನು ಪರಿಶೀಲನೆ ಮಾಡಿಕೊಂಡು ಹೋಗಿದ್ದಾರೆ. ಎಲ್ಲ ಡ್ಯಾಂ ಕಟ್ಟುತ್ತಾರೆ ಮತ್ತು ಯಾವ ಯಾವ ಪ್ರದೇಶಕ್ಕೆ ನೀರು ಸಿಗುತ್ತದೆ ಇವೆಲ್ಲವನ್ನೂ ನೋಡಿಕೊಂಡು ಹೋಗಿ ಕೇಂದ್ರ ಸರಕಾರಕ್ಕೆ ಏನು ವರದಿ ನೀಡಿದ್ದಾರೋ ಅದರ ವಿವರಗಳು ಗೊತ್ತಿಲ್ಲ. ವರದಿ ಕೊಟ್ಟಿರುವುದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ. ನಂಗನಗೌಡ.—ಕೇಂದ್ರ ಸರ್ಕಾರದವರು ಎರಡೂ ಯೋಜನೆಗಳನ್ನು ಸೇರಿಸಿ ಒಂದೇ ಯೋಜನೆಯನ್ನಾಗಿ ಮಾಡಲು ಹಣ ಕೊಟ್ಟಿದ್ದಾರೋ ಇಲ್ಲವೇ ಇವೆರಡಕ್ಕೂ ಬೇರೆಯಾಗಿ ಕೇಂದ್ರ ಹಣ ಕೊಡಬೇಕೆಂದು ಇದೆಯೇ ಎನ್ನುವುದನ್ನು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಒಂದು ವೇಳೆ ಹಣ ಒದಗಿಸಿದರೂ ಈಗ ಕೇಂದ್ರ ಸರಕಾರದವರು ತಾಂತ್ರಿಕ ಮಂಜೂರಾತಿ ಕೊಟ್ಟಿರುವುದು ಮೊದಲನೇ ಸ್ಟೇಜಿಗೆ ಮಾತ್ರ. ಎರಡನೇ ಸ್ಟೇಜ್ ಗಾಗಿ ಕೊಟ್ಟಿಲ್ಲ. ಐ. ಡಿ. ಎ. ಮಿಷನ್‌ನವರು ಹಣ ಒದಗಿಸುವುದು ಬೇರೆ ಬೇರೆ ಪ್ರಾಜೆಕ್ಟ್‌ಗಳಿಗೆ. ಎರಡನೇ ಪ್ರಾಜೆಕ್ಟ್‌ಗೆ ಅವರು ಒದಗಿಸುವ ಹಾಗಿಲ್ಲ. ಅವರ ರಿಪೋರ್ಟ್ ಏನು ಇರುತ್ತದೋ ಅದರಿಂದೇನೂ ನಮಗೆ ಕಡಿಮೆಯಾಗುವುದಿಲ್ಲ. ಅವರ ವರದಿ ನೋಡಿದ ಮೇಲೆ ಯಾವ ರೀತಿಯಾದ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುವ ಹಾಗಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರಕಾರದವರು ಮೊದಲು ನಾವು ಸಾಲ ಕೇಳಿದಾಗ ಐ. ಡಿ. ಎ.ಗೆ ತಿಳಿಸಿದ್ದರೇ ಹೇಗೆ? ಐ. ಡಿ. ಎ. ನವರು ಇಲ್ಲಿಗೆ ಬಂದು ಎರಡು ಪ್ರಾಜೆಕ್ಟ್‌ಗಳಿಗೂ ಹಣ ಮಂಜೂರು ಮಾಡುತ್ತೇವೆ ಎಂದು ಕೇಂದ್ರ ಸರಕಾರಕ್ಕೆ ರಿಪೋರ್ಟ್ ಮಾಡಿದರೆ ಅದರಲ್ಲಿ ಅರ್ಧ ದಷ್ಟು ಮಾತ್ರ ಹಣವನ್ನು ಕೇಂದ್ರ ಕೊಡಬೇಕು ಎಂದು ಇದೆಯಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಅವರ ರಿಪೋರ್ಟ್ ಏನು ಎನ್ನುವುದೇ ಗೊತ್ತಿಲ್ಲ. ಪ್ರತಿ ವರ್ಷ ಕೇಂದ್ರದವರು ಸಾಲ ಪಡೆಯುತ್ತಾರೆ. ಹಾಗೆ ಸಾಲ ಪಡೆಯುವಾಗ ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಬೇಕಾಗುತ್ತದೆ ಎನ್ನುವ ವಿವರಗಳನ್ನೆಲ್ಲಾ ಸೇರಿಸಿ ಕಳುಹಿಸಬೇಕಾಗುತ್ತದೆ. ಆದರಂತೆ ನಮ್ಮನ್ನು ಪ್ರಾಜೆಕ್ಟ್ ರಿಪೋರ್ಟ್ ಕೇಳಿದರು. ಅದರಂತೆ ಕಳುಹಿಸಿಕೊಡರಾಗಿದೆ. ಐ. ಡಿ. ಎ. ಆರ್ಗನೈಸೇಷನ್‌ನವರು ಯಾವ ಯಾವ ಸ್ಥಳಗಳನ್ನು ಅವರ ಪ್ರಪೋಸಲ್‌ನಲ್ಲಿ ಸೂಚನೆ ಮಾಡಿರುತ್ತಾರೋ ಅವನ್ನು ನೋಡಿ ತಿಳಿದುಕೊಳ್ಳಬೇಕು ಎಂದು ಅವರ ಪ್ರತಿನಿಧಿಗಳು ಇಲ್ಲಿಗೂ ಬಂದು ಇಲ್ಲಿನ ಸ್ಥಳಗಳನ್ನು ನೋಡಿಕೊಂಡು ಹೋಗಿದ್ದಾರೆ. ಮುಂದೆ ಏನಾಯಿತು ಎನ್ನುವುದು ನಮಗೆ ಗೊತ್ತಿಲ್ಲ.

Sri D. B. KALMANKAR.—Is it a fact that there are some Ministers at the Centre, who are not on meeting terms with the State Government, that they are advising the I.D.A. not to finance this particular project because it goes against the interests of Andhra Pradesh?

Sri VEERENDRA PATIL.—I do not think that the Central Government are against the Government of Mysore. I do not think they have done at any time anything justifying such an impression here. On the other hand we have been writing to the Government of India and we have been representing to the Government of India that this project is beyond the resources of the State plan and some funds or some resources should be found for that and so on our representation they are thinking of approaching the I.D.A. for financial assistance to this project. When we came to know that they are going to include this project they wrote to us and we sent one of our officers with all the project reports and necessary technical data. After receiving our report they sent some of their officers. They inspected the project and they have gone back. After they went back we do not know anything whether they have submitted a report or whether they are going to submit a report.

Sri D. B. KALMANKAR.—In view of the urgency, will the Government look into the matter and call for the Report that is submitted to the Government of India and take steps immediately ?

Sri VEERENDRA PATIL.—How can we force the I. D. A. organisation to submit a report, because we are approaching them to get financial assistance ? We cannot issue a mandate to them. When that is the case, there is no question of our forcing this organisation or that organisation to submit a report. On the other hand, we must do all that is possible to see that the organisation accepts our proposal and agrees to extend financial assistance to this project.

Sri RAJA PID NAIK.—May I know how many projects were visited by the I. D. A. Mission in our State.

Sri VEERENDRA PATIL.—So far as our State is concerned, this is the only project they have visited.

ಶ್ರೀ ಎಂ. ನಾಗಪ್ಪ.—ಸ್ವಾಮಿ, ತಾವು ಈ ಬಲದಂಡೆ ಕಾಲುವೆ ಬಗ್ಗೆ ಸೆಂಟ್ರಲ್ ಗವರ್ನ್ಮೆಂಟ್‌ನಿಂದ ಇನ್ನೂ ಚೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿಲ್ಲ ಎಂದು ಹೇಳಿದಿರಿ. ಈ ಚೆಕ್ನಿಕಲ್ ಕ್ಲಿಯರೆನ್ಸ್ ನಮ್ಮ ರಾಜ್ಯ ಸರ್ಕಾರದವರೇ ಕೇಳಿಲ್ಲವೋ ಅಥವಾ ಕೇಳಿದ್ದಾರೋ ಅಥವಾ ಕೇಳಿದ್ದರೆ ಕೇಂದ್ರ ಸರ್ಕಾರ ಕೊಟ್ಟಿಲ್ಲವೋ ? ತಾವು ಕೇಳಿ ಅವರು ಕೊಡದೆ ಇದ್ದರೆ ಮುಂದೆ ಈ ಪ್ರಾಜೆಕ್ಟ್‌ನಲ್ಲಿ ನೀರು ಉಳಿಯುತ್ತದೋ ಇಲ್ಲವೋ ತಿಳಿದಿಲ್ಲ. ಇಂತಹ ಯೋಜನೆಯನ್ನು ಇಟ್ಟುಕೊಂಡಿದ್ದೀರಿ. ರೀಅಲೋಕೇಷನ್ ಆದನಂತರ ಈ ಬಲದಂಡೆ ಕಾಲುವೆ ಯೋಜನೆಗೆ ತಾಂತ್ರಿಕ ಸ್ಯಾಂಕ್ಷನ್ ಕೊಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದಾರೆ ಎಂದು ನಮಗೆ ಗೊತ್ತಾಗುತ್ತದೆ. ಅದು ನಿಜವೇ? ಹಾಗಿದ್ದರೆ ರಾಜ್ಯ ಸರ್ಕಾರದವರು ಇದರಮೇಲೆ ಯಾವ ಕ್ರಮ ಕೈಕೊಳ್ಳುತ್ತಾರೆ ? ಅಥವಾ ಐ. ಡಿ. ಎ. ಅವರು ಲೋನ್ ಕೊಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಐ. ಡಿ. ಎ. ಅವರು ಕೇಂದ್ರದ ಶಿಫಾರಸ್ಸಿನ ಮೇಲೆ ದುಡ್ಡು ಕೊಡುತ್ತಾರೆ. ಕೇಂದ್ರ ಸರ್ಕಾರದವರು ಈ ಪ್ರಾಜೆಕ್ಟಿಗೆ ಚೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಾಗ ಎಷ್ಟು ಶಿಫಾರಸ್ಸು ಮಾಡಿದ್ದರೋ, ಅಷ್ಟು ಕೊಡುತ್ತಾರೆ. ಅದಕ್ಕಿಂತ ಹೆಚ್ಚು ಹಣ ಕೊಡುವುದಕ್ಕೆ ಶಿಫಾರಸ್ಸು ಮಾಡುವ ಹಾಗಿಲ್ಲ. ಮೊದಲನೆ ಸ್ಟೇಜಿಗೆ 70 ಕೋಟಿ ರೂಪಾಯಿ ಬೇಕಾಗಿದೆ. ಆ ಕೆಲಸವೇ ನಡೆಯುವ ಪರಿಸ್ಥಿತಿ ಇರುವಾಗ, ಎರಡನೇ ಸ್ಟೇಜಿಗೆ ಕೊಡಿ ಎಂದು ಕೇಳುವುದು ಅಷ್ಟು ಸಮಂಜಸವಲ್ಲ.

ಶ್ರೀ ಜಿ. ಎನ್. ಪಾಟೀಲ್.—ಸ್ವಾಮಿ, ಐ. ಡಿ. ಎ. ನಲ್ಲಿ ಅಲಮಟ್ಟಿ ಯೋಜನೆ ಬಗ್ಗೆ ಏನಾದರೂ ಸೇರಿದೆಯೇ ? ಇದರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಾಜೆಕ್ಟ್ ಬಗ್ಗೆ ಅವಷ್ಟು ಜಾಗ್ರತೆ ಮಾಡಬೇಕು ಎಂದು ಹೇಳಿದ್ದೇವೆ. ಅವರ ಅಭಿಪ್ರಾಯ ಏನು ಇದೆಯೋ ಗೊತ್ತಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಈ ವರ್ಷದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಸಾಲುವುದಿಲ್ಲ. ಆದುದರಿಂದ ಪಿ. ಎಲ್. 480 ಏನು ಇದೆ. ಅದರಿಂದ ಸಾಲ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೇ ! ನಾಗಾರ್ಜುನ ಸಾಗರಕ್ಕೆ ಕೊಟ್ಟ ಹಾಗೆ ಈ ಪ್ರಾಜೆಕ್ಟ್‌ಗೆ ಕೊಡುವುದಕ್ಕೆ ಸಾಧ್ಯವಿಲ್ಲವೇ ? ಇದರ ಬಗ್ಗೆ ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಏನು ಇದೆ ?

ಶ್ರೀ ವೀರೇಂದ್ರ ಪಾಟೀಲ್.—ನಾಗಾರ್ಜುನ ಸಾಗರಕ್ಕೆ ಅವರು ಕೊಡುವಂಥಾದ್ದು ಸ್ಪೇಟ್ ಪ್ಲಾನ್‌ಗೆ ಸೇರಿದೆ. ಆದರೆ ಅವರಿಗೆ ಹಣ ಕೊಡುತ್ತಿದ್ದಾರೆ. ನಾವು ಕೂಡ ನಮಗೆ ಅಸಿಸ್ಟೆನ್ಸ್ ಕೊಡಬೇಕು ಎಂದು ಪದೇ ಪದೇ ಕೇಳುತ್ತಿದ್ದೇವೆ. ಅವರು ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ. ಅವರು ಐ. ಡಿ. ಎ. ಆರ್ಗನೈಸೇಷನ್‌ನಿಂದಾದರೂ ಕೊಡಲಿ ಯಾವುದರಿಂದರಾದರೂ ಕೊಡಲಿ. ನಮಗೆ ಕೊಡಬೇಕು ಎನ್ನುವ ಪ್ರಯತ್ನ ನಡೆಯುತ್ತಾ ಇದೆ.

ಶ್ರೀ ಬಾಪೂಗೌಡ.—ಈಗಾಗಲೇ ಕೃಷ್ಣಾ ನದಿಯಲ್ಲಿ ನೀರಿನ ಅಭಾವವಾಗಿದೆ. ಆಂಧ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ವರ್ಲ್ಡ್ ಬ್ಯಾಂಕ್‌ನವರು

ಧನಸಹಾಯ ಮಾಡದೇ ಹೋದ ಪಕ್ಷದಲ್ಲಿ ರಾಜ್ಯ ಸರ್ಕಾರದವರು ಈ ಪ್ರಾಜೆಕ್ಟ್‌ನಿಂದ ನೀರನ್ನು ಪಡೆಯಲಿಕ್ಕೆ, ಆಂಧ್ರ ರಾಜ್ಯದಲ್ಲಿ ಇದರಲ್ಲಿ ಅಚ್ಚುಕಟ್ಟು ಪ್ರದೇಶವನ್ನು ಯಾವರೀತಿ ಜಾಸ್ತಿ ಮಾಡಿಕೊಂಡಿದ್ದಾರೋ ಆ ರೀತಿ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆಯೇ ? ಐ. ಡಿ. ಎ. ನವರು ಹೆಚ್ಚು ಹಣ ಸಹಾಯ ಮಾಡದೇ ಹೋದ ಪಕ್ಷದಲ್ಲಿ ಇದರ ಬಗ್ಗೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಐ. ಡಿ. ಎ. ನಿಂದ ಲೋನ್ ಬರದೇ ಹೋದರೆ ಅದು ಮಾಡುವ ಪರಿಸ್ಥಿತಿಯಲ್ಲಿಲ್ಲ ಎಂದು ಏನೂ ಇಲ್ಲ. ಒಂದು ವೇಳೆ ಅವರು ಸಹಾಯ ಮಾಡದೇ ಹೋದರೆ ಅದನ್ನು ಕಾರ್ಯಗತಗೊಳಿಸಲು ನಮ್ಮ ಸಂಪನ್ಮೂಲಗಳನ್ನು ಕೆಂಡುಹಿಡಿದು ಅದನ್ನು ಮುಂದುವರೆಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಯೋಜನೆಗೆ ಹಣವನ್ನು ಒದಗಿಸಬೇಕೆಂದು ವಿಶ್ವಬ್ಯಾಂಕಿಗೆ ಕೇಂದ್ರ ಸರ್ಕಾರ ಒತ್ತಾಯ ಮಾಡುತ್ತಿದೆಯೇ ಎಂದು ಕೇಳಿದ್ದಕ್ಕೆ ಭಾರತ ಸರ್ಕಾರದಿಂದ ಆ ಬಗ್ಗೆ ಯಾವ ಪತ್ರವೂ ಬಂದಿಲ್ಲ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದಕ್ಕೋಸ್ಕರ ಏನಾದರೂ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆಯೇ ? ಎಡದಂಡೆ ನಾಲೆ ಕೆಲಸವನ್ನು ಸರ್ಕಾರ ಪ್ರಾರಂಭ ಮಾಡಿದೆ. ಅದಕ್ಕೆ ಚೆಕ್ಕಿಕಲ್ ಮಂಜೂರಾತಿ ಸಿಕ್ಕಿದೆಯೇ ಅಥವಾ ರಾಜ್ಯ ಸರ್ಕಾರದವರೇ ಆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಏನು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ ಅದನ್ನು ಕೇಂದ್ರ ಯಾವರೀತಿ ಪ್ರಾಜೆಕ್ಟ್ ರಿಪೋರ್ಟ್ ಕ್ಲಿಯರ್ ಮಾಡಿದ್ದಾರೋ ಅದರಂತೆ ಮಾಡಿದ್ದೇವೆ. ಕೆಲಸವನ್ನು ಪ್ರಾರಂಭ ಮಾಡಿದ್ದರೂ ಅದು ಚುರುಕಾಗಿ ನಡೆಯುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲಸ ಚುರುಕಾಗಿ ನಡೆಯಬೇಕಾಗಿದ್ದರೆ ಅದಕ್ಕೆ ಪ್ರತ್ಯೇಕವಾಗಿ ನಮಗೆ ಧನ ಸಹಾಯಬೇಕು. ಯಾವುದಾದರೂ ಫಾರೆನ್ ಆರ್ಗನೈಜೇಷನ್ ಸಂಸ್ಥೆಯಿಂದ ಕೊಡಬೇಕೆಂಬ ಪ್ರಯತ್ನ ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ. ಆ ಬಾಬಿನಿಂದ ಸಹಾಯ ಬಂದಾಗ ಕೆಲಸ ಬೇಗ ನಡೆಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಸೇತುವೆ, ರಸ್ತೆ, ಇವುಗಳಿಗಾಗಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ ಅವುಗಳನ್ನೆಲ್ಲ ನಿಲ್ಲಿಸಿ, ಇನ್ನೂ ಅನೇಕ ರೀತಿಯಿಂದ ನಮ್ಮ ಸಂಪನ್ಮೂಲಗಳನ್ನು ಜಾಸ್ತಿ ಮಾಡಿ, ನಾವೇ ಈ ಕೆಲಸವನ್ನು ಕೈಕೊಂಡರೆ ಆಗಬಹುದೂ ಇದರ ಬಗ್ಗೆ ಕೇಂದ್ರ ಸರ್ಕಾರ ತನ್ನ ಕಣ್ಣು ತೆರೆಯುತ್ತದೆ ಎನ್ನುವುದನ್ನು ಒಪ್ಪುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದವರು ಸಹಾಯ ಮಾಡಲಾರದೆ ಹೋದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಮಾಡಲೇಬೇಕಾಗುತ್ತದೆ. ನಾವು ಅದಷ್ಟು ಹೆಚ್ಚು ದುಡ್ಡನ್ನು ಉಳಿಸಿ ಈ ತರಹ ಪ್ರಾಜೆಕ್ಟ್‌ಗಳಿಗೆ ಹೆಚ್ಚು ದುಡ್ಡನ್ನು ಖರ್ಚುಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಎಷ್ಟರಮಟ್ಟಿಗೆ ಉಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಎಷ್ಟರಮಟ್ಟಿಗೆ ಹೆಚ್ಚು ಸಂಪನ್ಮೂಲಗಳನ್ನು ರೂಢಿಸಿಕೊಂಡು ಇಂಥ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನೂ ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ.

Sri H. SIDDAVEERAPPA.—Are there any projects in India which are already financed by I.D.A. ?

Sri VEERENDRA PATIL.—I have no idea about that.

Sri THIRUMALADEVARAYA.—If the ryots of right bank contribute one hundred or two hundred rupees per acre, is the Government going to take up that canal ?

Sri VEERENDRA PATIL.—Sir, about the advance contribution, I believe, the Bill is already before the House, it has been introduced and in all probability it might come up for consideration. Only after that Bill is passed, we can think of collecting advance contribution, not before that.